ಪಿ ಡಬ್ಲೂ-1

**4 ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫಸಿ ಧಾರವಾಡ.**

ಸತ್ಯ ಪ್ರತಿಜ್ಞೆಯ ಮೇರೆಗೆ ದಿ. **18.11.2023.**

**ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ.**

ಈ ಪ್ರಕರಣದಲ್ಲಿ ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನನ್ನ ಪರವಾಗಿ ನಿಶಾನಿಸಬೇಕೆಂದು ಕೋರಿಕೊಳ್ಳುತ್ತೇನೆ. ಸಾಕ್ಷಿ ಹಾಜರುಪಡಿಸಿರುವ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನಿಸಲಾಗಿದೆ.

| | |
|---|---|
| ನಿಪಿ.5 | ಪ್ರತಿವಾದಿಗೆ ನೀಡಿದ ನೊಟಿಸನ ಕಚೇರಿ ಪ್ರತಿ |
| ನಿಪಿ.6 | ಸ್ಪಿಡ ಪೊಸ್ಟ ರಶೀದಿ |
| ನಿಪಿ.7 | ಸರ್ವೇ ನಂ.38 ಎ/ಪ್ಲಾಟ ನಂ.84/1 ರ ಆರ್ ಟಿ ಸಿ |
| ನಿಪಿ.8 | ಸರ್ವೇ ನಂ.38 ಎ/ಪ್ಲಾಟ ನಂ.84/2 ರ ಆರ್ ಟಿ ಸಿ |
| ನಿಪಿ.9 | ದಿಃ 16.09.2022 ರ ಮರುಉತ್ತರ |

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ವಿಜಯ ಮಾನೆ ವಕೀಲರಿಂದ**

**1.** ನನಗೆ ಪ್ರತಿವಾದಿ ಬಸವರಾಜ ರವರು ವ್ಯವಹಾರದ ಮೂಲಕ ಪರಿಚಯಸ್ಥರಾಗಿದ್ದರು. ಸದರಿ ದಾವಾ ಸ್ವತ್ತಿಗೆ ಸಂಬಂದಿಸಿದ ವ್ಯವಹಾರ ರೂ.20,00,000/- ಗಳಿಗೆ ಆಗಿತ್ತು. ಸದರಿ ಮೃತ ಬಸವರಾಜ ರವರಿಗೆ ಅವರ ಮನೆತನದ ಅಡಚಣೆ ಇತ್ತು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿಯವರಿಗೆ ಯಾವುದೇ ಅಡಚಣೆ ಇಲ್ಲದೆ ಇದ್ದರು ಸಹ ಇತ್ತು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಯೆ ಪ್ರಮಾಣ ಪತ್ರ ದಲ್ಲಿ ದಾವಾ

ಆಸ್ತಿಯನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ ಪ್ರತಿವಾದಿ ನನಗೆ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿದ್ದ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಮೃತ ಪ್ರತಿವಾದಿಗೆ ರೂ.5,00,000/- ಗಳನ್ನು ಕೈಗಡ ಸಾಲವಾಗಿ ನೀಡಿರುತ್ತೇನೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ಅದಕ್ಕೆ ಸಂಬಂದಿಸಿದಂತೆ ಸದರಿ ಮೃತ ಪ್ರತಿವಾದಿ ನನಗೆ ಚೆಕ್ಕ ನೀಡಿದ್ದು ಅದು ಅಮಾನ್ಯಗೊಂಡಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಾನು ವಕೀಲರ ಮುಖಾಂತರ ನೊಟಿಸ ನೀಡಿರುತ್ತೇನೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರ ದ 6 ನೇ ಪ್ಯಾರಾದಲ್ಲಿ ಹೇಳಿದ ಹಾಗೇ ಸದರಿ ಪ್ರತಿವಾದಿ ನನಗೆ ಯಾವುದೇ ರೀತಿಯಿಂದ ಅವಾಚ್ಯ ಶಬ್ದ ಗಳಿಂದ ಬೈದಾಡಿಲ್ಲ ಆದರೂ ಸಹ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಬರೆದುಕೊಟ್ಟಿರುತ್ತಾರೆ ಎನ್ನಲಾದ ಕರಾರು ಪತ್ರಕ್ಕೂ ಹಾಗೂ ಪ್ರತಿವಾದಿ ನಂ.1 (ಡಿ) ರವರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಬಿಟ್ಟು ಪ್ರತಿವಾದಿ ನಂ.1 (ಎ) ಯಿಂದ (ಡಿ) ರವರಿಗೆ ಬೇರೆ ಆಸ್ತಿಗಳು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮಾತ್ರ ಸದರಿಯವರ ಮನೆತನಕ್ಕೆ ಇದುದ್ದರಿಂದ ಅವುಗಳನ್ನು ಖರೀದಿ ನೀಡುವ ಪ್ರಸಂಗ ಸದರಿ ಮೃತ ಪ್ರತಿವಾದಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರ ದಲ್ಲಿ ಸುಳ್ಳು ಸಂಗತಿಗಳನ್ನು ಬರೆದಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ಅದಕ್ಕೆ ಪೂರಕವಾಗುವಂತೆ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

**(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಅದೆ,

**( ಅಮೊಲ್ ಜಯಕುಮಾರ ಹಿರಿಕುಡೆ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.